14) ಚಿತ್ರದುರ್ಗ	353
15) ಬಿಜಾಪುರ	8
16) ಕೊಡಗು	148
17) ಚಿಕ್ಕಮಗಳೂರಿ	12
18) ಮಂಡ್ಯ	50
19) ರಾಯಚೂರು	18
20) ಗುಲ್ಬರ್ಗಾ	-
ಒಟ್ಟು	**2161**

ಆ) 58

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಅಂಗನವಾಡಿ ಯೋಜನೆ ಬಗ್ಗೆ

137 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತವಿಸುವರೆ?

ಆ) *ಶಿವಮೊಗ್ಗ ಜಿಲ್ಲೆಯಲ್ಲಿ ಅಂಗನವಾಡಿ ಯೋಜನೆ ಜಾರಿಯಲ್ಲಿರುವ ತಾಲ್ಲೂಕುಗಳಾವುವು?*

ಆ) *ಈ ತಾಲ್ಲೂಕಿನಲ್ಲಿ ವಾಸ ಮಾಡುತ್ತಿರುವ ಹರಿಜನ, ಗಿರಜನ ಸಂಖ್ಯೆ ಎಷ್ಟು?*

ಇ) *ಶಿಕಾರಿಪುರ ತಾಲ್ಲೂಕಿನಲ್ಲಿ ವಾಸ ಮಾಡುತ್ತಿರುವ ಹರಿಜನ ಗಿರಿಜನರೆಷ್ಟು? ಇಲ್ಲಿ ಅಂಗನವಾಡಿ ಯೋಜನೆ ಮಂಜೂರಾಗದಿರಲು ಕಾರಣವೇನು?*

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು)

ಆ) ಸೊರಬ, ಚನ್ನಗಿರಿ, ಸಾಗರ, ಭದ್ರಾವತಿ, ಹೊನ್ನಾಳಿ, ಶಿವಮೊಗ್ಗ (ಗ್ರಾಮಾಂತರ) ತಾಲ್ಲೂಕುಗಳು.

ಆ)

ತಾಲ್ಲೂಕು	*ಹರಿಜನರು*	*ಗಿರಿಜನರು*
ಸೊರಬ	22611	2314
ಚೆನ್ನಗಿರಿ	48958	27443
ಸಾಗರ	13969	2375
ಭದ್ರಾವತಿ	51465	3910
ಹೊನ್ನಾಳಿ	31644	5648
ಶಿವಮೊಗ್ಗ	46706	5379

ಇ) ಹರಿಜನರು 31,133

ಗಿರಿಜನರು 2.171

ಇತ್ತೀಚೆಗೆ ಕೇಂದ್ರ ಸರ್ಕಾರದಿಂದ ಶಿಕಾರಿಪುರ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆ ಮಂಜೂರು ಮಾಡಲಾಗಿದೆ.

ಶಿಕಾರಿಪುರದಲ್ಲಿ ಮಿನಿ ಸ್ಟೇಡಿಯಂ ನಿರ್ಮಾಣದ ಬಗ್ಗೆ

138 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ಪಟ್ಟಣದಲ್ಲಿನ ಮಾಧ್ಯಮಿಕ ಶಾಲಾ ಮೈದಾನವನ್ನು "ಮಿನಿ ಸ್ಟೇಡಿಯಂ" ಆಗಿ ಪರಿವರ್ತಿಸಲು ಸರ್ಕಾರ ಯೋಚಿಸಿದೆಯೇ.

ಆ) ಹಾಗಿದ್ದಲ್ಲಿ ಈ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೈಲಹೊಂಗಲ ನಗರದಲ್ಲಿ ಅಗ್ನಿಶಾಮಕದಳ ಸ್ಥಾಪಿಸುವ ಬಗ್ಗೆ.

401 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಅಗ್ನಿಶಾಮಕ ದಳದ ಘಟಕವನ್ನು ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ಕೃಷಿ ಉತ್ಪನ್ನ ಸಹಕಾರ ಸಂಘದವರು ಈಗಾಗಲೇ ಅಗ್ನಿಶಾಮಕ ಘಟಕ ಸ್ಥಾಪಿಸುವ ಬಗ್ಗೆ ಜಾಗೆಯನ್ನು ಸರ್ಕಾರಕ್ಕೆ ಕೊಟ್ಟಿರುವರೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ) ಈ ಪ್ರಸ್ತಾಪನೆಯನ್ನು 1990-91ನೇ ಆರ್ಥಿಕ ಸಾಲಿನಲ್ಲಿ ಸರ್ಕಾರರ ಪರಿಶೀಲಿಸಲಾಗುತ್ತಿದೆ.

ಆ) ಇಲ್ಲ, ದಿನಾಂಕ 14-6-87 ರಂದು ನಡೆದ ಸಭೆಯಲ್ಲಿ, ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ಸಲುವಾಗಿ 4 ಎಕರೆ ಜಮೀನನ್ನು ಈ ಇಲಾಖೆಗೆ ಮಂಜೂರು ಮಾಡಲು ನಿಶ್ಚಯಿಸಿರುವುದಾಗಿ ಎ.ಪಿ.ಎಂ.ಸಿ. ಕಾರ್ಯದರ್ಶಿ ತಿಳಿಸಿದ್ದಾರೆ. ಆದರೆ, ಸದರಿ ಜಮೀನು ಇಲ್ಲಿಯವರೆಗೆ ಇಲಾಖೆಗೆ ವಹಿಸಿ ಕೊಟ್ಟಿರುವುದಿಲ್ಲ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮುರಗೋಡ, ದೊಡವಾಡ ಸ್ಟೇಡಿಯಂ ಕೆಲಸಗಳನ್ನು ಕುರಿತು

401 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಮುರಗೋಡ ಹಾಗೂ ದೊಡವಾಡ ಗ್ರಾಮಗಳಲ್ಲಿ ಕಟ್ಟುತ್ತಿರುವ ಸ್ಟೇಡಿಯಂಗಳು ಅರ್ಧಕ್ಕೆ ನಿಂತ ಸಂಗತಿ ಗಮನಕ್ಕೆ ಬಂದಿದೆಯೇ,